ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಮಣಿಪಾಲ ಪ್ರಧಾನ ಅಂಚೆ ಕಛೇರಿಯಿಂದ ಕೈಗಾರಿಕಾ ಪ್ರದೇಶದವರೆಗಿನ (ಅಂಬಾಗಿಲು–ಮಣಿಪಾಲ–ಉದ್ಯಾವರ ಮಲ್ಪೆ ಜಿಲ್ಲಾ ಮುಖ್ಯ ರಸ್ತೆಯ ಕಿಮೀ 7 50 ರಿಂದ 10 00 ವರೆಗೆ) 2 50 ಕಿಮೀ ರಸ್ತೆ ಉದ್ದದ ಭಾಗವನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ರವರಿಗೆ ಹಸ್ತಾಂತರಿಸಲಾಗಿದೆ

ಆ) ಹಸ್ತಾಂತರವಾದ ರಸ್ತೆ ಸರಪಳಿಗೆ ಲೋಕೋಪಯೋಗಿ ಇಲಾಖೆ ವತಿಯಿಂದ ಅನುದಾನ ಮಂಜೂರಾಗಿರುವುದಿಲ್ಲ ಆದರೆ ಲೋಕೋಪಯೋಗಿ ಇಲಾಖೆ ಪರಿವ್ಯಾಪ್ತಿಯಲ್ಲಿನ

1 ಕಿಮೀ 9 50 ರಿಂದ 15 00 ರವರೆಗೆ ಲೆಕ್ಕ ಶೀರ್ಷಿಕೆ 5054 ರಲ್ಲಿ 2005–06 ರಲ್ಲಿ ರೂ 40 00 ಲಕ್ಷ

2 ಕಿಮೀ 2 00 ರಿಂದ 8 00 ಮತ್ತು 17 00 ರಿಂದ 19 00 ರವರೆಗೆ 2006–07 ರಲ್ಲಿ ಲೆಕ್ಕ ಶೀರ್ಷಿಕೆ 3054 ರಲ್ಲಿ ರೂ 40 00 ಲಕ್ಷ ಅನುದಾನ ಮಂಜೂರಾಗಿದೆ

ಇ) 2005–06ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 5054 ರಡಿಯಲ್ಲಿ ರೂ 40 00 ಲಕ್ಷ ಅಂದಾಜು ಮೊತ್ತದಲ್ಲಿ ಕಿ ಮೀ 9 50 ರಿಂದ 15 00 ಕಿಮೀ ವರೆಗೆ ಅಭಿವೃದ್ಧಿಪಡಿಸಿ ಡಾಂಬರೀಕರಣ ಮಾಡುವ ಕಾಮಗಾರಿಯಲ್ಲಿ ಈಗಾಗಲೇ 2 50 ಕಿಮೀ ಉದ್ದ ಡಾಂಬರೀಕರಣ ಮಾಡಲಾಗಿರುತ್ತದೆ 2006–07ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 3054 ಯೋಜನೆಯಡಿಯಲ್ಲಿ ರೂ 40 00 ಲಕ್ಷ ಅಂದಾಜು ಮೊತ್ತದಲ್ಲಿ ಕಿಮೀ 2 00 ರಿಂದ 8 00 ಹಾಗೂ 17 00 ರಿಂದ 19 00 ರಲ್ಲಿ ಅಭಿವೃದ್ಧಿಪಡಿಸಿ, ಡಾಂಬರೀಕರಣ ಮಾಡಲು ಗುತ್ತಿಗೆದಾರರನ್ನು ನೇಮಿಸಲು ಟೆಂಡರ್ ಪ್ರಕ್ರಿಯೆಯಲ್ಲಿದೆ

ಈ) ಮಾರ್ಚ್ 2007ರ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು

419 (516) ಶ್ರೀ ರಾಜೇಂದ್ರನ್ ಎಸ್ (ಕೆ ಜಿ ಎಫ್) ಮಾನ್ಯ ಗೃಹ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ ಜಿ ಎಫ್ ವಿಧಾನಸಭಾ ಕ್ಷೇತ್ರದಲ್ಲಿ ಸಂಚಾರಿ ಪೊಲೀಸ್ ಠಾಣೆಯ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪೊಲೀಸ್ ಠಾಣೆ ಆರಂಭಿಸಲು ಗೃಹ ಇಲಾಖೆಗೆ ಆದೇಶೀಸಿದ್ದರೂ ಸಹ ಇದುವರೆವಿಗೂ ತೆರೆಯದಿರಲು ಕಾರಣವೇನು,

ಇ) ಪೊಲೀಸ್ ಠಾಣೆಯನ್ನು ಯಾವಾಗ ತೆರೆಯಲಾಗುವುದು?

ಎಂ ಪಿ ಪ್ರಕಾಶ್ (ಗೃಹ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿದೆ

ಆ) ಪ್ರಸ್ತಾವನೆ ದಿನಾಂಕ 3 2 2007 ರಂದು ಸ್ವೀಕೃತವಾಗಿದ್ದು, ಪರಿಶೀಲಿಸಲಾಗುತ್ತಿದೆ

ಇ) ಉದ್ಭವಿಸುವುದಿಲ್ಲ

420 (491) ಶ್ರೀ ರೋಷನ್‌ಬೇಗ್ (ಜಯಮಹಲ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸ್ಮಾರ್ಟ್ ಕಾರ್ಡ್ ವ್ಯವಸ್ಥೆಯನ್ನು ಕರ್ನಾಟಕ ಸರ್ಕಾರದ ಸಚಿವಾಲಯ ವಿಧಾನ ಸೌಧದಲ್ಲಿ ಅಳವಡಿಸಲಾಗಿದೆಯೇ,

ಆ) ಇದಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ,

ಇ) ಈ ಯೋಜನೆಯನ್ನು ನಿಲ್ಲಿಸಲಾಗಿದೆಯೇ?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಹೌದು

ಆ) ರೂ 15,87,665/– (ಹದಿನೈದು ಲಕ್ಷ ಎಂಭತ್ತೇಳು ಸಾವಿರದ ಆರು ನೂರ ಅರವತ್ತೈದು ರೂಪಾಯಿಗಳು ಮಾತ್ರ)

ಇ) ಇಲ್ಲಾ

421 (492) ಶ್ರೀ ರೋಷನ್‌ಬೇಗ್ (ಜಯಮಹಲ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ಸಹ ಸಾಗಾಣಿಕೆಗೆ ಖರ್ಚು ಮಾಡಿರುವ ಒಟ್ಟು ಮೊತ್ತ ಎಷ್ಟು,

ಆ) ನೇಮಕ ಮಾಡಿಕೊಳ್ಳಲಾದ ಗುತ್ತಿಗೆದಾರರ ಸಂಖ್ಯೆ,

ಇ) ಗುತ್ತಿಗೆದಾರರಿಗೆ ವಹಿಸಲು ಅನುಸರಿಸಿದ ವಿಧಾನ?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಸ ಸ್ವಚ್ಛಗೊಳಿಸುವುದು, ಕಸ ಸಂಗ್ರಹಣೆ ಸಾಗಾಣಿಕೆ ಮತ್ತು ವಿಲೇವಾರಿಗಾಗಿ ದಿನಾಂಕ 1 4 2004ರಿಂದ 31 12 2006 ರವರೆಗೆ ವೆಚ್ಚ ಮಾಡಿರುವ ಮೊತ್ತ ರೂ 24,650,67 ಲಕ್ಷಗಳು

ಆ) ನೇಮಕಾತಿ ಮಾಡಿಕೊಳ್ಳಲಾದ ಗುತ್ತಿಗೆದಾರರ ಸಂಖ್ಯೆ 30

ಇ) ಗುತ್ತಿಗೆ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ

422 (493) ಶ್ರೀ ರೋಷನ್‌ಬೇಗ್ (ಜಯಮಹಲ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1999 ರಿಂದ 2004 ಮತ್ತು 2004 ರಿಂದ 2006 ರ ನಡುವೆ ಪ್ರಾಧಿಕಾರವು ಭೂಸ್ವಾಧೀನದಿಂದ ಕೈಬಿಟ್ಟಿರುವ ಜಮೀನಿನ ಪ್ರಕರಣಗಳ ಸಂಖ್ಯೆ ಮತ್ತು ವಿಸ್ತೀರ್ಣ (ಫಲಾನುಭವಿಗಳ ಹೆಸರು ಮತ್ತು ಸರ್ವೆ ನಂ ನಮೂದಿಸುವುದು)?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ)1999 ರಿಂದ 31–12–2004ರ ವಿವರಗಳನ್ನು ಅನುಬಂಧ–1ರಲ್ಲಿ ಹಾಗೂ 1–1–2005 ರಿಂದ 31 12 2006 ರವರೆಗಿನ ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ